ಮಲಪ್ರಭಾ ಎಡದಂಡೆ ಕಾಲುವೆ 100-030ರಲ್ಲಿ ಸೇತುವೆ ನಿರ್ಮಾಣ

12 (151)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲಪ್ರಭಾ ಎಡದಂತೆ ಕಾಲುವೆ 100+030ರಲ್ಲಿ ಸೇತುವೆಯನ್ನು ನಿರ್ಮಿಸಲು ಬಹಳ ವರ್ಷಗಳಿಂದ ರೈತರು ಆಗ್ರಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ.ಎನ್.ನಾಗೇಗೌಡ (ಭಾರೀ ನೀರಾವರಿ ಸಚಿವರು):

ಅ) ಬಂದಿದೆ.

ಆ) ಸೇತುವೆ ನಿರ್ಮಾಣ ಅವಶ್ಯಕತೆಯನ್ನು ಪರೀಶೀಲಿಸಿ ಶೀಘ್ರವಾಗಿ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರವನ್ನು ಸರ್ಕಾರಿ ಶಾಲೆಗಳಲ್ಲಿ ಪ್ರದರ್ಶಿಸುವುದು.

14 (123)

ಶ್ರೀ ಐ.ಎಂ.ಜಯರಾಮ ಶೆಟ್ಟಿ (ಬೈಂದೂರು): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಜನ ಸ್ವಾತಂತ್ರ್ಯ ಹೋರಾಟಗಾರರಿಗೆ ಪಿಂಚಣಿ ನೀಡಲಾಗುತ್ತಿದೆ.

ಆ) ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಆಚರಿಸುವ ಈ ವರ್ಷದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳು ನೆನಪಿಗಾಗಿ ಅವರು ವಾಸವಾಗಿರುವ ಊರುಗಳ ಸರ್ಕಾರಿ ಶಾಲೆಗಳಲ್ಲಿ ಅವರ ಭಾವ ಚಿತ್ರಗಳನ್ನು ಖಾಯಂ ಆಗಿ ಪ್ರದರ್ಶಿಸುವ ಇರಾದೆ ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):

ಅ) 22651

ಆ) ಇಲ್ಲ.